ಮುಚ್ಚಬೇಕು. (ಒಂದರಿಂದ ಐದು ವರ್ಷದ ಗಿಡಗಳಿಗೆ 1.5 ಅಡಿ ದೂರದಲ್ಲಿ).

**ಪೋಷಕಾಂಶ ನಿರ್ವಹಣೆ:** 1–4 ವರ್ಷದ ಗಿಡಗಳಿಗೆ ಸಾರಜನಕ 200 ಗ್ರಾಂ, ರಂಜಕ 25 ಗ್ರಾಂ, ಪೊಟ್ಯಾಶ್ 100 ಗ್ರಾಂ ಪ್ರತಿ ಗಿಡಕ್ಕೆ ಕೊಡಬೇಕಾಗುತ್ತದೆ. ಮೂರು ತಿಂಗಳಿಗೊಮ್ಮೆ ವರ್ಷದಲ್ಲಿ ನಾಲ್ಕು ಬಾರಿ ಕೊಡಬೇಕಾಗುತ್ತದೆ. ಫಲ ಕೊಡುವ ಮರಗಳಿಗೆ ಹೆಚ್ಚು ಪೋಷಕಾಂಶಗಳನ್ನು ನೀಡಬೇಕಾಗುತ್ತದೆ. 4–12 ವರ್ಷದ ಮರಗಳಿಗೆ ಸಾರಜನಕ 200 ಗ್ರಾಂ, ರಂಜಕ 25 ಗ್ರಾಂ, ಪೊಟ್ಯಾಷ್ 130 ಗ್ರಾಂ ಪ್ರತಿ ಮರಕ್ಕೆ ಕೊಡಬೇಕಾಗುತ್ತದೆ. ಕಾಯಿ ಕಚ್ಚಿದ ನಾಲ್ಕು ವಾರಗಳ ನಂತರ ನಾಲ್ಕನೇ ಒಂದು ಭಾಗವನ್ನು ಕೊಡಬೇಕಾಗುತ್ತದೆ. ನಿರ್ಧರಿತ ಪ್ರಮಾಣದ ಅರ್ಧ ಭಾಗವನ್ನು ಹಣ್ಣು ಕಟಾವಾದ ತಕ್ಷಣ ಕೊಡಬೇಕಾಗುತ್ತದೆ ಮತ್ತು ಉಳಿದ ನಾಲ್ಕನೇ ಒಂದು ಭಾಗವನ್ನು ಕಟಾವಾದ ಒಂಬತ್ತು ವಾರಗಳ ನಂತರ ಕೊಡಬೇಕಾಗುತ್ತದೆ. 12 ವರ್ಷದ ನಂತರ ಮರಗಳು ಪೋಷಕಾಂಶಗಳನ್ನು ತೆಗೆದುಕೊಳ್ಳುವ ಕ್ಷಮತೆ ನಿರಂತರವಾಗಿ ಸಮನಾಗಿರುವುದರಿಂದ ಅದೇ ಪ್ರಮಾಣದ ಪೋಷಕಾಂಶ ನೀಡಬೇಕಾಗುತ್ತದೆ

**ನೀರಾವರಿ:** ಮರದಡಿಯ ಮಡಿಯಲ್ಲಿ ಸಸಿಗಳ ಪ್ರಾರಂಭದ ಬೆಳವಣಿಗೆಯ ಸಮಯದಲ್ಲಿ ಒಣಗಿದ ಸೊಪ್ಪು–ಸದೆಯಿಂದ ಒಣ ಹವಾಮಾನದ ಹೊತ್ತಿಗೆ ಭೂಮಿಯನ್ನು ಮುಚ್ಚಬೇಕು. ಆದರೆ ಹೂಬಿಡುವ ಮುನ್ನ ಬೇಡ. ಮಳೆಯ ಅಭಾವದ ಸ್ಥಿತಿಯಲ್ಲಿ ಕಾಲುವೆಯಿಂದ ಅಥವಾ ಹನಿ–ನೀರಾವರಿಯಿಂದ ಅವಶ್ಯಕತೆಗೆ ತಕ್ಕಂತೆ ನೀರಾವರಿ ಕೊಡಬೇಕು. ಬಹಳ ದಿನಗಳವರೆಗೆ ಒಣ ಹವಾಮಾನ ಉಂಟಾದರೆ ಕಾಯಿಗಳು ಉದುರುತ್ತವೆ.

**ಮಧ್ಯಂತರ ಬೇಸಾಯ ಮತ್ತು ಗಿಡ ಸವರುವುದು:** ಸಾಲುಗಳ ನಡುವಣ ಹಾಗೂ ಪಾತಿಗಳಲ್ಲಿನ ಮಣ್ಣನ್ನು ಆಗಾಗ್ಗೆ ಲಘುವಾಗಿ ಸಡಿಲಿಸಬೇಕು. ಅದರಿಂದ ಕಳೆಗಳ ಬಾಧೆ ಇರುವುದಿಲ್ಲ ಹಾಗೂ ತೇವ ಬಹುಕಾಲ ಉಳಿಯುತ್ತದೆ. ಅಂತರ ಬೆಳೆಯಾಗಿ ಕೆಲವು ವರ್ಷಗಳವರೆಗೆ ವಿವಿಧ ತರಕಾರಿ, ಹಸಿರೆಲೆ ಗೊಬ್ಬರ ಮುಂತಾದುವುಗಳ ಬೆಳೆಯಬಹುದು.

ರಾಂಬುಟಾನ್ ಗಿಡಗಳು ಬೇಗನೆ ಬೆಳೆಯುವುದರಿಂದ ಸರಿಯಾದ ರೀತಿಯಲ್ಲಿ ಗಿಡ ಬೆಳೆಯಲು ಅನುಕೂಲವಾಗುವ ಹಾಗೆ ರೆಂಬೆ, ಕೊಂಬೆಗಳನ್ನು ಸವರುವುದು, ನೇರ ಹಾಗೂ ನಿರ್ದಿಷ್ಟವಾಗಿ ಬೆಳೆಯಲು ಆಸರೆ (ಕೋಲು ಕಟ್ಟುವುದು) ಕೊಡುವುದನ್ನು ಸಮಯಕ್ಕನುಗುಣವಾಗಿ ಮಾಡಬೇಕು. ಕಟಾವಿನ ನಂತರ ಹಣ್ಣು ಬಿಟ್ಟಿದ ಮತ್ತು ಒಣಗಿದ ರೆಂಬೆ, ಕೊಂಬೆಗಳನ್ನು ಸವರುವುದರಿಂದ ಮುಂದಿನ ಋತುವಿಗೆ ಹೊಸದಾಗಿ ಚಿಗುರೊಡೆದು ಹೆಚ್ಚು ಕಾಯಿ ಬಿಡಲು ಸಹಕಾರಿಯಾಗುತ್ತದೆ

**ಕೊಯ್ಲು ಮತ್ತು ಇಳುವರಿ:** ಗಿಡ ನಾಟಿ ಮಾಡಿದ ನಾಲ್ಕು ವರ್ಷಗಳ ನಂತರ ಹಣ್ಣುಗಳನ್ನು ಪಡೆಯಬಹುದಾಗಿದೆ. ಕಾಯಿ ಕಚ್ಚಿದ ನಂತರ ಹಣ್ಣಾಗಲು 4–5 ತಿಂಗಳು ತೆಗೆದುಕೊಳ್ಳುತ್ತದೆ. ಹಣ್ಣು ಪೂರ್ಣ ಮಾಗಿದಾಗ ಮಾತ್ರವೇ ಕೊಯ್ಲು ಮಾಡಬೇಕು. ದಕ್ಷಿಣ ಪೂರ್ವ ಏಷ್ಯಾ ಖಂಡ ದೇಶಗಳಲ್ಲಿ ವರ್ಷಕ್ಕೆ 2 ಬಾರಿ ಹಣ್ಣು ಕಟಾವು ಮಾಡಬಹುದು. ಮೊದಲ ಪ್ರಮುಖ ಕಟಾವು ಜೂನ್ ತಿಂಗಳಲ್ಲಿ ಮತ್ತು ಕಡಿಮೆ ಪ್ರಮಾಣದ ಕಟಾವು ಡಿಸೆಂಬರ್ ತಿಂಗಳಲ್ಲಿ ಮಾಡಲಾಗುತ್ತದೆ. ಭಾರತದಲ್ಲಿ ವರ್ಷಕ್ಕೆ ಒಮ್ಮೆ ಮಾತ್ರ ಜುಲೈ–ಅಕ್ಟೋಬರ್ ತಿಂಗಳವರೆಗೆ ಕಟಾವು ಮಾಡಬಹುದು. ಹಣ್ಣು ನೆಲಕ್ಕೆ ಬೀಳದ ಹಾಗೆ ಇಡೀ ಗೊಂಚಲನ್ನೇ ಮುರಿದು ಕಟಾವು ಮಾಡಬೇಕು. ಮರದ ಸರಾಸರಿ ಇಳುವರಿ 60–90 ಕಿ.ಗ್ರಾಂ ಗಳಷ್ಟಿರುತ್ತದೆ. ಸುಮಾರು 20–30 ವರ್ಷಗಳವರೆಗೆ ಲಾಭದಾಯಕ ಫಸಲು ಸಾಧ್ಯ.

**ರೋಗಗಳು:**

**ಬೂದಿ ರೋಗ:** ಹೂವು, ಹೀಚು ಹಾಗೂ ಎಳೆಯ ಚಿಗುರಲ್ಲಿ ಈ ರೋಗವು ಕಾಣಿಸಿಕೊಂಡು ಅಪಾರ ಹಾನಿಯನ್ನು ಉಂಟುಮಾಡುತ್ತವೆ. ಅಲ್ಲದೇ ಮಳೆಗಾಲದಲ್ಲಿ ಈ ರೋಗ ಹೆಚ್ಚಾಗಿ ಕಂಡುಬರುತ್ತದೆ.

**ಹತೋಟಿ:** ಪ್ರತಿ ಲೀಟರ್ ನೀರಿಗೆ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಸಿಂಪಡಿಸುವುದರಿಂದ ರೋಗ ಹತೋಟಿ ಮಾಡಬಹುದು.

**ಕೀಟಗಳು:** ಕೀಟಗಳಲ್ಲಿ ಬೂಷ್ಪ ತಿಗಣೆ, ಕಾಂಡ ಕೊರೆಯುವ ಹುಳು, ಹಣ್ಣಿನ ನೊಣ, ಎಲೆ ತಿನ್ನುವ ಕಂಬಳಿಹುಳು ಪ್ರಮುಖವಾದುವುಗಳು. ನಿಯಂತ್ರಣಕ್ಕೆ ಶೇಕಡಾ 5 ರ ಬೇವಿನ ಬೀಜದ ಕಷಾಯ ಸಿಂಪರಣೆ ಮಾಡಬಹುದು.

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ
ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ.
ಕಂಕನಾಡಿ, ಮಂಗಳೂರು – 575 002

# ರಾಂಬುಟಾನ್ ಹಣ್ಣಿನ ಬೇಸಾಯ ಕ್ರಮಗಳು



**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು**
**ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ**
**ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು,**
**ಕಂಕನಾಡಿ ಅಂಚೆ, ಮಂಗಳೂರು,**
**ದಕ್ಷಿಣ ಕನ್ನಡ – 575002**
www.kvkdk.org, kvkdk@rediffmail.com
0824–2431872

ರಾಂಬುಟಾನ್ ಹಣ್ಣು ಸ್ಯಾಪಿಂಡೇಸಿ ಕುಟುಂಬಕ್ಕೆ ಸೇರಿದ್ದು. ಇದನ್ನು ಏಷ್ಯಾ ಖಂಡದ ದಕ್ಷಿಣ–ಪೂರ್ವ ಭಾಗಗಳ ಭೂ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲ್ಪಡುತ್ತಿದೆ, ಅಲ್ಲದೇ ಭಾರತ ಹಾಗೂ ಶ್ರೀಲಂಕಾ ದೇಶಗಳಲ್ಲಿಯೂ ಬೆಳೆಯಲಾಗುತ್ತಿದೆ ಈ ಹಣ್ಣು ಮೊದಲಿಗೆ ಮಲೆಯ ದೇಶದ ಆರ್ಚಿಪೆಲೆಗೊ ಪ್ರದೇಶದಲ್ಲಿ ಕಾಣಿಸಿಕೊಂಡಿತು. ಈ ಹಣ್ಣಿಗೆ ಹೆಸರು ಬರಲು ಕಾರಣ ಮಲೆಯ ಭಾಷೆಗಳಲ್ಲಿ ಈ ಹಣ್ಣಿನ ಕೂದಲನ್ನು ರಾಂಬೂಟ್ ಎಂದು ಕರೆಯುತ್ತಾರೆ ಇದನ್ನು ರೋಮವುಳ್ಳ ಲಿಚ್ಚಿ (Hairy litchy) ಎಂದು ಸಹ ಕರೆಯಲಾಗುತ್ತದೆ. ಹಣ್ಣುಗಳ ತಿರುಳಿನಲ್ಲಿ ಅಧಿಕ ಪ್ರಮಾಣದ ಶರ್ಕರಪಿಷ್ಟ, ಖನಿಜ ಪದಾರ್ಥ ಹಾಗೂ 'ಸಿ' ಜೀವಸತ್ವ ಇರುತ್ತವೆ. ಈ ಹಣ್ಣುಗಳ ಸೇವನೆಯಿಂದ ಹೊಟ್ಟೆಯಲ್ಲಿನ ಜಂತು ಹುಳುಗಳು ನಾಶಗೊಳ್ಳುತ್ತವೆ.

ಭಾರತದಲ್ಲಿ ರಾಂಬುಟಾನ್ ಹಣ್ಣಿನ ಬೇಸಾಯವು ಕೇರಳದ ಜಿಲ್ಲೆಗಳಾದ ತ್ರಿಶೂರ್, ಕೊಟ್ಟಾಯವಮ್, ಎರ್ನಾಕುಲವಮ್, ತಮಿಳುನಾಡಿನ ನಾಗರಕೊಲ್ಲಿ, ಕೊಟ್ರಾಲಮ್, ನೀಲಿಗಿರಿ ಹಾಗೂ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ರಾಂಬೂಟಾನ್ ಮರಗಳು ಹೆಣ್ಣು, ಗಂಡು ಅಥವಾ ಉಭಯಲಿಂಗಗಳಾಗಿರುತ್ತವೆ. ಹಣ್ಣುಗಳು ಲಿಚ್ಚಿ ಹಣ್ಣುಗಳನ್ನು ಹೋಲುತ್ತವೆ. ಹಣ್ಣಿನ ಹೊರಮೈ ಒರಟಾಗಿದ್ದು, ಉದ್ದ ಹಾಗೂ ದಪ್ಪವಾದ ಹಳದಿ, ನಸುಗೆಂಪು ಮತ್ತು ಕೆಂಪು ಬಣ್ಣಗಳ ಕೂದಲುಗಳಿಂದ ಕೂಡಿರುತ್ತದೆ. ಹಣ್ಣಿನ ಒಳತಿರುಳು ಪ್ರಕಾಶಿತ ಬಿಳಿ ಅಥವಾ ಗುಲಾಬಿ ಮಿಶ್ರಿತ ಬಣ್ಣದಿಂದ ಕೂಡಿದ್ದು, ರಸಭರಿತ ತಿರುಳು ರುಚಿಯಲ್ಲಿ ಸಿಹಿ–ಹುಳಿಗಳ ಮಿಶ್ರಣವಿರುತ್ತದೆ.

**ಮಣ್ಣು:** ಈ ಬೆಳೆಯನ್ನು ಹೆಚ್ಚು ಫಲವತ್ತತೆಯಿಂದ ಕೂಡಿದ, ನೀರು ಬಸಿಯುವ, ಆಳವಾದ ಮರಳು ಮಿಶ್ರಿತ ಗೋಡು ಮಣ್ಣು ಅಥವಾ ಕೆಂಪು ಗೋಡು ಮಣ್ಣುಗಳಲ್ಲಿ ಹೆಚ್ಚಿನ ಸಾವಯವಯುಕ್ತ ಅಂಶಗಳುಳ್ಳ ಮಣ್ಣುಗಳಲ್ಲಿ ಹೆಚ್ಚಿನ ಇಳುವರಿ ಹಾಗೂ ಗುಣಮಟ್ಟದ ಬೆಳೆ ಬೆಳೆಯಲು ಉಪಯುಕ್ತ. ಮಣ್ಣಿನ ರಸಸಾರ 4.5 ರಿಂದ 6.5 ಇರಬೇಕು. ಹೆಚ್ಚು ನೀರು ನಿಲ್ಲುವ ಭೂಪ್ರದೇಶ ಈ ಬೆಳೆಗೆ ಸೂಕ್ತವಲ್ಲ. ಸರಳ ಇಳಿಜಾರಿನ ಭೂಮಿಯಲ್ಲಿ ನೀರು ಹರಿದು ಹೋಗುವಂತ ಮಣ್ಣು ಅತ್ಯಂತ ಸೂಕ್ತ. ಮಣ್ಣಿನಲ್ಲಿ ಸತು ಮತ್ತು ಕಬ್ಬಿಣದ ಅಂಶ ಹೆಚ್ಚಾಗಿರಬೇಕು ಇಲ್ಲವಾದಲ್ಲಿ ಪೋಷಕಾಂಶಗಳ ಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಗಿಡದ ಬೆಳವಣಿಗೆ ಕುಂಠಿತವಾಗುತ್ತದೆ.

**ಹವಾಗುಣ:** ರಾಂಬುಟಾನ್ ಬೆಳೆ ಉಷ್ಣವಲಯದ ಬೆಳೆ. ಆರ್ದ್ರತೆಯಿಂದ ಕೂಡಿದ ಹವೆ ಇರಬೇಕು. ಸಮುದ್ರ ಮಟ್ಟದಿಂದ ಸರಾಸರಿ 700–1000 ಮೀ ಎತ್ತರದ ಪ್ರದೇಶಗಳಲ್ಲಿ ಬೆಳೆಯಬಹುದು. ಸಾಮಾನ್ಯವಾಗಿ 22 ರಿಂದ 30 ಡಿಗ್ರಿ ಉಷ್ಣಾಂಶದಲ್ಲಿ ಚೆನ್ನಾಗಿ ಬೆಳೆಯಬಹುದು. ರಾಂಬೂಟನ್ ಬೆಳೆಗೆ 10 ಡಿಗ್ರಿ ಗಿಂತ ಕಡಿಮೆ ಉಷ್ಣಾಂಶವಿದ್ದಲ್ಲಿ ಬೆಳವಣಿಗೆ ಸಂಪೂರ್ಣ ಕುಂಠಿತವಾಗಿ ಎಲೆ ಉದುರುವುದು, ಚಿಗುರು ಹೊರಬರದೆ ಇರುವುದು, ಹೂಗಳು ಮತ್ತು ಹಣ್ಣುಗಳು ಬಿಡದಿರುವ ಲಕ್ಷಣಗಳು ಕಂಡುಬರುತ್ತವೆ. ಹಾಗೆಯೇ 40 ಡಿಗ್ರಿ ಗಿಂತ ಹೆಚ್ಚಿನ ಉಷ್ಣಾಂಶವಿದ್ದಲ್ಲಿಯೂ ಬೆಳವಣಿಗೆ ಕುಂಠಿತವಾಗುತ್ತದೆ. ಕಡಿಮೆ ಆರ್ದ್ರತೆ ಇದ್ದಲ್ಲಿ ಹೂಗಳು, ಕಾಯಿಗಳು ಮತ್ತು ಹಣ್ಣುಗಳ ಬೆಳವಣಿಗೆ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಈ ಬೆಳೆಗೆ 200 ರಿಂದ 500 ಸೆಂ. ಮೀ. ಮಳೆ ವರ್ಷಪೂರ್ತಿ ಸಮಭಾಜಿತವಾಗಿ ಅತ್ಯವಶ್ಯಕವಾಗಿರುತ್ತದೆ. ಕಾಯಿಗಳು ಹಣ್ಣಾಗುವ ಸಮಯದಲ್ಲಿ ಅತಿ ಹೆಚ್ಚು ಮಳೆಯಾದರೆ, ಕಾಯಿ ಮತ್ತು ಹಣ್ಣುಗಳಲ್ಲಿ ಬಿರುಕು ಮೂಡುವ ಸಂಭವ ಹೆಚ್ಚಾಗಿರುತ್ತದೆ.

**ನಾಟಿಕಾಲ:** ಜೂನ್– ಜುಲೈ ತಿಂಗಳುಗಳು ಸೂಕ್ತ.

**ತಳಿಗಳು:** ಕೆಂಪು ಹಣ್ಣಿನ ಹಾಗೂ ಹಳದಿ ಹಣ್ಣಿನ ಬಗೆಗಳು ಮುಖ್ಯವಾದುವು.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಅಂಗ ಸಂಸ್ಥೆಯಾದ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರದವರು ಅಭಿವೃದ್ಧಿ ಪಡಿಸಿರುವ ತಳಿಗಳೆಂದರೆ ಅರ್ಕ ಕೂರ್ಗ್ ಅರುಣ್, ಅರ್ಕ ಕೂರ್ಗ್ ಪಿತಾಬ್, ಸಿ ಎಚ್ ಇ ಎಸ್–26, ಸಿ ಹೆಚ್ ಇ ಎಸ್–14

**1. ಅರ್ಕ ಕೂರ್ಗ್ ಅರುಣ್–** ಮರಗಳು ಮಧ್ಯಮ ಎತ್ತರಕ್ಕೆ ಬೆಳೆಯುವ, ಸಾಧಾರಣವಾಗಿ ಹರಡಿಕೊಳ್ಳುವ, ಬೇಗನೆ ಫಲ ಕೊಡುವ ತಳಿಯಾಗಿದೆ. ಹಣ್ಣುಗಳು ಕಡು ಕೆಂಪು ಬಣ್ಣವಿದ್ದು 40 ರಿಂದ 45 ಗ್ರಾಂ ತೂಗುತ್ತವೆ. ಇದು ಬೇಗನೆ ಕೊಯ್ಲಿಗೆ ಬರುವಂತ ತಳಿಯಾಗಿದ್ದು, ಫೆಬ್ರವರಿ ತಿಂಗಳಿನಲ್ಲಿ ಹೂ ಬಿಟ್ಟು ಸೆಪ್ಟೆಂಬರ್ ಅಕ್ಟೋಬರ್‌ನಲ್ಲಿ ಕೊಯ್ಲಿಗೆ ಬರುತ್ತದೆ. ತಿರುಳು ದಪ್ಪವಾಗಿ, ಗಟ್ಟಿಯಾಗಿ, ಬಿಳಿಯಾಗಿರುತ್ತದೆ. ಹತ್ತು ವರ್ಷದ ಗಿಡ ಸರಾಸರಿ 750 ರಿಂದ 1000 ಹಣ್ಣುಗಳನ್ನು ಕೊಡುತ್ತವೆ.

**2. ಅರ್ಕ ಕೂರ್ಗ್ ಪಿತಾಬ್:** ಹೆಚ್ಚು ಇಳುವರಿ ಕೊಡುವ ಪ್ರತಿ ಋತುಗಳಲ್ಲಿ ಹಣ್ಣು ಬಿಡುವ ತಳಿಯಾಗಿದೆ. ಮಧ್ಯಮ ಎತ್ತರ, ಸಾಧಾರಣವಾಗಿ ಹರಡಿಕೊಳ್ಳುವ ತಳಿಯಾಗಿದೆ. ತಿರುಳು ಬಿಳಿಯಾಗಿದ್ದು ಸಿಹಿ ಮತ್ತು ರಸಭರಿತವಾಗಿರುತ್ತದೆ. ಹಣ್ಣುಗಳ ಹೊರಮೈ ಹಳದಿ ಬಣ್ಣದಿಂದ ಕೂಡಿದ್ದು, ಹಣ್ಣುಗಳು 25 ರಿಂದ 30 ಗ್ರಾಂ ತೂಕವಿರುತ್ತದೆ. ಹತ್ತು ವರ್ಷದ ಗಿಡ ಸರಾಸರಿ 1200 ರಿಂದ 1500 ಹಣ್ಣುಗಳನ್ನು ಕೊಡುತ್ತವೆ

**ಅಂತರ:** ಗಿಡಗಳು ಬೇಗನೆ ಬೆಳೆದು ಹರಡಿಕೊಳ್ಳುವುದರಿಂದ ಗಿಡದಿಂದ ಗಿಡಕ್ಕೆ ಹೆಚ್ಚು ಅಂತರವನ್ನು ಕಾಯ್ದುಕೊಳ್ಳ ಬೇಕಾಗುತ್ತದೆ. ಇಲ್ಲವಾದಲ್ಲಿ 10 ರಿಂದ 15 ವರ್ಷಗಳಲ್ಲಿ ಒಂದರ ಮೇಲೊಂದು ಹರಡಿಕೊಂಡು ಬಿಡುತ್ತವೆ. ಸಾಮಾನ್ಯವಾಗಿ 10 x 10 ಮೀಟರ್ ಅಂತರಕ್ಕೆ ಗಿಡ ನೀಡುತ್ತಾರೆ. ಕಸಿ ಮಾಡಿದ ಗಿಡಗಳು ಹೆಚ್ಚು ಹರಡುವುದಿಲ್ಲ ಹಾಗಾಗಿ, 8 x 8 ಅಥವಾ 8 x 6 ಮೀಟರ್ ಅಂತರಕ್ಕೆ ನೀಡಬಹುದು. ಒಂದು ಹೆಕ್ಟೇರ್ ಭೂಮಿಯಲ್ಲಿ ಸರಾಸರಿ 100 ರಿಂದ 150 ಗಿಡಗಳನ್ನು ನೆಡಬಹುದಾಗಿದೆ.

**ನಾಟಿ ಮಾಡುವುದು:** ಭೂಮಿಯನ್ನು 2 ಬಾರಿ ಉಳುಮೆ ಮಾಡಿ ಶಿಫಾರಸ್ಸು ಮಾಡಿದ ಅಂತರದಲ್ಲಿ 3 ಘನ ಅಡಿ ಗಾತ್ರದ ಗುಣಿಗಳನ್ನು ತೆಗೆಯಬೇಕು. ಸಮಪ್ರಮಾಣದಲ್ಲಿ ಬೆರೆಸಿದ ಕೊಟ್ಟಿಗೆ ಗೊಬ್ಬರ ಮತ್ತು ಮೇಲ್ಮಣ್ಣಿನ ಮಿಶ್ರಣಕ್ಕೆ ಬೇವಿನ ಎಲೆಗಳನ್ನು ಸೇರಿಸಿ ಗುಣಿಗಳನ್ನು ತುಂಬಬೇಕು. ನಂತರ ಪ್ರತಿ ಗುಣಿಯ ಮಧ್ಯದಲ್ಲಿ ಒಂದರಂತೆ ಕಸಿಗಿಡಗಳನ್ನು ಕಸಿಗಂಟು ನೆಲಮಟ್ಟದಿಂದ 0.5–1.0 ಅಡಿ ಎತ್ತರದಲ್ಲಿ ಇರುವಂತೆ ನಾಟಿ ಮಾಡಿ ಕೋಲಿನ ಸಹಾಯದಿಂದ ಆಸರೆ ಒದಗಿಸಬೇಕು. ಮೊದಲೆರಡು ವರ್ಷ ಮಳೆಯಿಲ್ಲದ ದಿನಗಳಲ್ಲಿ ಹಾಗೂ ಬೇಸಿಗೆಯಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸಬೇಕು. ಪ್ರಾರಂಭದ ವರ್ಷದಲ್ಲಿ ಹನಿ ನೀರಾವರಿ ಪದ್ಧತಿಯು ಉಪಯುಕ್ತ. ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಗಿಡದಿಂದ 3 ಅಡಿ ದೂರದಲ್ಲಿ ತೆಗೆದ ತಗ್ಗು ಕಾಲುವೆಯಲ್ಲಿ ಹಾಕಿ ಮಣ್ಣಿನಿಂದ